ಕಥೋಪದೇಶ

# ಸ್ವೀಕರಿಸದ ಭಿಕ್ಷೆ

**ಗೌ**ತಮ ಬುದ್ಧನೊಮ್ಮೆ ರಾಜಗೃಹದಲ್ಲಿದ್ದನು. ಅವನು ಒಮ್ಮೆ ಭಿಕ್ಷೆಗೆ ಹೋಗಿದ್ದಾಗ ಬ್ರಾಹ್ಮಣನೊಬ್ಬನು ಅವನಿಗೆ ಬೈಯತೊಡಗಿದನು. ಬುದ್ಧನು ಶಾಂತನಾಗಿಯೇ ಕೇಳುತ್ತ ನಿಂತಿದ್ದನು. ಅವನ ಬೈಗುಳ ಸುರಿಮಳೆ ಮುಗಿದು ಅವನು ಸುಮ್ಮನಾದಾಗ, ಬುದ್ಧನು ಮುಗುಳ್ನಗುತ್ತ ಕೇಳಿದನು "ಬ್ರಾಹ್ಮಣನೇ, ನಿನ್ನ ಮನೆಗೆ ಯಾರಾದರೂ ಅತಿಥಿಗಳಾಗಿ ಬರುವುದುಂಟೆ?" ಹೌದೆಂದನು ಬ್ರಾಹ್ಮಣ. "ನೀನು ನಿನ್ನ ಅತಿಥಿಗೆ ಉತ್ತಮ ಭೋಜನ ಸಿದ್ಧಪಡಿಸುವೆಯಲ್ಲ! ಆದರೆ ಆ ಅತಿಥಿ ಆ ಭೋಜನವನ್ನು ಸ್ವೀಕರಿಸದಿದ್ದರೆ ಆ ಭೋಜನವೇನಾಗುತ್ತದೆ?" "ನನ್ನಲ್ಲೇ ಉಳಿಯುತ್ತದೆ" ಎಂದ ಬ್ರಾಹ್ಮಣ. "ಅದರಂತೆಯೇ ನಿನ್ನ ಈ ಬೈಗುಳನ್ನೆಲ್ಲ ನಾನು ಸ್ವೀಕರಿಸದಿದ್ದರೆ ನಿನ್ನಲ್ಲೇ ಉಳಿಯುತ್ತದಲ್ಲವೇ? ನಾನು ಈ ತನಕ ಯಾರಿಗೂ ಬೈದವನಲ್ಲ. ನಿನ್ನ ಯಾವ ಮಾತುಗಳೂ ನನಗೆ ಉಪಯೋಗವಿಲ್ಲ" ಎಂದನು ಗೌತಮ ಬುದ್ಧ. ಬ್ರಾಹ್ಮಣನು ತಲೆತಗ್ಗಿಸಿ ಕ್ಷಮೆ ಯಾಚಿಸಿದನು. ❋



ಕಲೆ : ಸೋಮಶೇಖರ